
# ವಿಠಲನ ನೆನಕೆಯಲ್ಲಿ ಭಕಿಯ ಕನವರಿಕೆ!



## ಜಯತು ಜಯ ವಿಠಲಾ...

**ಮರಾಠಿ ಅಭಂಗಗಳು ಭಕ್ತಿಯ ಸಿಂಚನ ನೀಡುತ್ತವೆ. ಜನಪ್ರಿಯವಾಗಿರುವ ಅಭಂಗಗಳು ಸಂಗೀತ ವಿದ್ವಾಂಸರ ಕಂಠದಲ್ಲಿ ಸುಶ್ರಾವ್ಯವಾಗಿ ಹೊರಹೊಮ್ಮಿದ್ದು ಸ್ವರಾಲಾಪಕ್ಕೆ ದೈವೀ ಸ್ಪರ್ಶ ಏರ್ಪಟ್ಟು, ಸಂಗೀತದ ನಾದ ಮಾಧುರ್ಯದೊಂದಿಗೆ ಜ್ಞಾನದ ಸೆರಗನ್ನೂ ಹೊದೆಸುತ್ತವೆ.**

■ ಉಮಾ ಅನಂತ್



ಮಾಝೆ ಮಾಹೇರ ಪಂಢರಿ, ಆಹೆ ಭೀವರೇಚ್ಯಾ ತೀರಿ... ಪಂಢರಪುರದ ಪುರಂದರ ವಿಠಲನ ಬಗ್ಗೆ ಇರುವ ಈ ಮರಾಠಿ ಅಭಂಗವನ್ನು ಕೇಳಿ ಆಸ್ವಾದಿಸಿ ಆನಂದಿಸದ ಕಲಾರಸಿಕರಿಲ್ಲ. ಪಂಢರಪುರದ ವಿಠಲನ ಮೇಲೆ ಇರುವ ಈ ಭಕ್ತಿಪ್ರಧಾನ ಅಭಂಗ ಕೇಳಲು ಪರಮಾನಂದಕರ. ಭಾರತರತ್ನ ಪಂ. ಭೀಮಸೇನ ಜೋಶಿ ಅವರ ಕಂಠದಲ್ಲಿ ಸುಶ್ರಾವ್ಯವಾಗಿ ಮೂಡಿಬಂದ ಈ ಭಜನೆ ದೈವೀಭಾವನೆ ಮೂಡಿಸುವಲ್ಲಿ ಅತ್ಯಂತ ಯಶಸ್ವಿಯಾಗಿದೆ. ‘ಮಿಶ್ರಮಾಂಡ್’ ರಾಗದಲ್ಲಿರುವ ಈ ಅಭಂಗದಲ್ಲಿ ಎಲ್ಲ ಶುದ್ಧ ಸ್ವರಗಳೇ ಇದ್ದು, ಷಡ್ಜ ಮತ್ತು ಪಂಚಮದಲ್ಲಿ ಇದರ ಜೀವವೇ ಅಡಗಿದೆ ಎಂದರೂ ತಪ್ಪಾಗದು. ಈ ಸ್ವರಗಳ ಮೂಲಕ ಶಾಂತ ಮತ್ತು ಭಕ್ತಿ ಸ್ವರವನ್ನಾಳುವ ಸಂಯೋಜನೆ ಈ ಅಭಂಗದ್ದು. ಈ ಹಾಡಿನ ಆಲ್ಬಂ ಹೆಸರು ಮಹಾ ಗಾಯಕ ಭಾಗ್, ಸಂಗೀತ ನಿರ್ದೇಶನ ಮಾಡಿದವರು ರಾಮ್ ಪಾಟಕ್ ಹಾಗೂ ಸಾಹಿತ್ಯ ರಚನೆ ಸಂತ ಏಕನಾಥ್ ಅವರು ಮಾಡಿದ್ದು ಇಡೀ ಅಭಂಗ ಬಹಳ ಅರ್ಥಪೂರ್ಣವಾಗಿದೆ.

### ಭಕ್ತಿಪ್ರಧಾನ ಕಾವ್ಯ

ಅಭಂಗ ಎಂದರೆ ಭಂಗವಿಲ್ಲದ, ದೋಷರಹಿತ, ನಿರಂತರ ಕ್ರಿಯೆ ಎಂಬ ಅರ್ಥವನ್ನು ಸೂಚಿಸುತ್ತದೆ. ಮರಾಠಿ ಅಭಂಗಗಳು ವಿಠಲನ ಮಹಿಮೆಯನ್ನು ಕೊಂಡಾಡಿ ಹಾಡಲಾಗಿರುವ ಭಕ್ತಿಪ್ರಧಾನ ಕಾವ್ಯದ ಒಂದು ರೂಪ. ಅಭಂಗಗಳನ್ನು ಭಕ್ತರು ಪಂಢರಪುರದ ದೇವಸ್ಥಾನಗಳಿಗೆ ತೀರ್ಥಯಾತ್ರೆ ಹೋಗುವ ಅವಧಿಯಲ್ಲಿ ಹಾಡುತ್ತಾರೆ. ಸಾಮಾನ್ಯವಾಗಿ ಮರಾಠಿ ಭಜನೆಗಳು ದೇವರ ಆವಾಹನೆಯಿಂದಲೇ ಶುರುವಾಗುತ್ತವೆ, ಕೊನೆಯಲ್ಲಿ ಆಧ್ಯಾತ್ಮಿಕ ಹಾಗೂ ನೈತಿಕ ಸಂದೇಶಗಳನ್ನು ಇಂಥ ಭಜನೆಗಳು ಕೊಡುತ್ತವೆ. ಪಂ. ಭೀಮಸೇನ ಜೋಶಿ, ಕಿಶೋರಿ ಅಮೋನಕರ, ಸುರೇಶ್ ವಾಡ್ಕರ್, ಜಯತೀರ್ಥ ಮೇವುಂಡಿ, ಜಿತೇಂದ್ರ ಅಭಿಷೇಕಿ ಮುಂತಾದ ಕಲಾವಿದರು ಅಭಂಗಗಳನ್ನು ಹಾಡಿ ಜನಪ್ರಿಯಗೊಳಿಸಿದ್ದಾರೆ.